



# ಶ್ರೀ ಜಯದೇವ (ಭಾಗ ೨)

ಕಥೆ : ಟಿ.ಎಂ. ಸುಂದರರಾಮನ್
ಚಿತ್ರ : ಶಂಕರ್

18 ರಾಜನು ಜಯದೇವನ ‘ಗೀತಗೋವಿಂದ’ ಕಾವ್ಯದ ವಾಚನಕ್ಕೆ ತಕ್ಕ ವೇದಿಕೆಯನ್ನು ಸಿದ್ಧಪಡಿಸಿದನು.





19 ಆ ವೃದ್ಧ ಓದಿದ ಕಾವ್ಯವು ಜಯದೇವನ ‘ಗೀತ-ಗೋವಿಂದ’ದಂತೆಯೇ ಇತ್ತು. ಅದನ್ನು ಕೇಳಿ ಎಲ್ಲರಿಗೂ ಆಶ್ಚರ್ಯವಾಯಿತು. ಕೂಡಲೇ ಒಂದು ಅಶರೀರವಾಣಿ ಕೇಳಿಬಂತು.




ಆ ವೃದ್ಧ ಮಾಯವಾದ, ಅವನೇ ಶ್ರೀಕೃಷ್ಣನಾಗಿ ಅಲ್ಲಿ ನಿಂತ.


20 ಒಂದು ಸಲ ಜಯದೇವನು ಒಬ್ಬ ವ್ಯಾಪಾರಿಯ ಮನೆಯಲ್ಲಿ ತಂಗಿದ. ಮರಳಿ ಬರುವಾಗ ಆ ವ್ಯಾಪಾರಿಯು ಗಾಡಿ ತುಂಬ ಹಲವು ಉಡುಗೊರೆಗಳೊಂದಿಗೆ ತುಂಬಿದ. ದಾರಿ ಮಧ್ಯೆ ಕಾಡಿನಲ್ಲಿದ್ದ ದರೋಡೆಕೋರರು ಅದನ್ನೆಲ್ಲ ದೋಚಿದರು.

21





ಜಯದೇವನು ಕೈಗಳನ್ನು ಕಳೆದುಕೊಂಡು ಪಾಳುಬಾವಿಗೆ ಎಸೆಯಲ್ಪಟ್ಟರೂ, ಅವನು ಶ್ರೀಕೃಷ್ಣನ ಸ್ತುತಿ ಮಾಡತೊಡಗಿದ.

22




23 ಕೆಲವು ದಿನಗಳ ನಂತರ ರಾಜನಿಗೆ ಚಿಂತೆ ಮೂಡಿತು ...





24 ರಾಜ ಹಾಗೂ ಮಂತ್ರಿಗಳು ಜಯದೇವನನ್ನು ಕಾಡಿನ ಪಾಳುಬಾವಿಯಿಂದ ಮೇಲೆತ್ತಿ ರಕ್ಷಿಸಿದರು. ಅವನನ್ನು ಮರಳಿ ಅರಮನೆಗೆ ಕರೆತಂದರು.





25 ರಾಜನು ಪ್ರತಿ ವರ್ಷ ತನ್ನ ಆಸ್ಥಾನದಲ್ಲಿ ಕವಿಗಳಿಗೆ ಸನ್ಮಾನ ಮಾಡಿ ಉಡುಗೊರೆ ನೀಡುತ್ತಿದ್ದ. ಈ ವರ್ಷ ಜಯದೇವನನ್ನು ಹಿಂಸಿಸಿದ ದರೋಡೆಕೋರರೂ ವೇಷ ಮರೆಸಿಕೊಂಡು ರಾಜನ ಆಸ್ಥಾನಕ್ಕೆ ಬಂದರು. ಜಯದೇವನನ್ನು ಅಲ್ಲಿ ನೋಡಿ ಅವರು ಆಶ್ಚರ್ಯಗೊಂಡರು.




ಗಡಿಪ್ರದೇಶದಲ್ಲಿ ದರೋಡೆಕೋರರು ತಮ್ಮನ್ನು ಉಳಿಸಿದ ಜಯದೇವನ ಬಗ್ಗೆ ಸ್ವಲ್ಪವೂ ಕೃತಜ್ಞತೆ ತೋರಿಸದೆ, ರಾಜಭಟರ ಮುಂದೆ ಆತನನ್ನು ತೆಗಳಿದರು.


26
ರಾಜನ ಆಸ್ಥಾನದಲ್ಲಿರುವ ಆ ಅಂಗವಿಕಲ ವ್ಯಕ್ತಿ ಒಬ್ಬ ನಯವಂಚಕ. ರಾಜನು ಅವನಿಗೆ ವಧೆ ಶಿಕ್ಷೆ ನೀಡಿದ್ದ, ಅವನನ್ನು ವಧಿಸಲು ನಮ್ಮನ್ನು ಕಳುಹಿಸಿದ್ದ.
ಹೌದೆ?
ಹೌದು. ಆದರೆ ನಾವು ಅವನನ್ನು ಕೊಲ್ಲದೆ, ಬರೀ ಕೈಕಾಲು ಕತ್ತರಿಸಿಬಿಟ್ಟೆವು, ಅಷ್ಟೆ.
27
ಭೂದೇವಿ ಜಯದೇವನಿಗೆ ವಿರುದ್ಧವಾಗಿ ಮಾಡಿದ ಆರೋಪಗಳನ್ನು ಸಹಿಸಲಾಗದೆ ಒಂದೇ ಬಾರಿಗೆ ಬಾಯಿ ತೆರೆದು ಆ ದರೋಡೆಕೋರರನ್ನು ನುಂಗಿಬಿಟ್ಟಳು.
ರಾಜಭಟರು ಈ ಕಥೆಯನ್ನೆಲ್ಲ ರಾಜನಿಗೆ ತಿಳಿಸಿದರು. ಜಯದೇವನು ದರೋಡೆಕೋರರಿಗೋಸ್ಕರ ದೇವರಿಗೆ ಪ್ರಾರ್ಥನೆ ಸಲ್ಲಿಸಿದನು. ಆ ಕೂಡಲೇ ಅರಮನೆಯಲ್ಲಿ ಭಗವಂತನ ವಾಣಿ ಕೇಳಿಬಂತು.
28
ಜಯದೇವ, ನೀನು ಆ ಅಪರಾಧಿಗಳಿಗೋಸ್ಕರ ಸಲ್ಲಿಸಿದ ಪ್ರಾರ್ಥನೆಯನ್ನು ನಾನು ಕೇಳಿಸಿಕೊಂಡೆ. ಮುಂದಿನ ಜನ್ಮದಲ್ಲಿ ಅವರು ಉತ್ತಮ ವ್ಯಕ್ತಿಗಳಾಗಿ ಜನಿಸುವರು. ನಿನ್ನ ಕತ್ತರಿಸಲ್ಪಟ್ಟ ಅಂಗಗಳು ಸರಿಯಾಗುವವು.
ದೇವರು ತಾನಾಗಿಯೇ ಜಯದೇವನನ್ನು ಕಾಪಾಡಿದನೆಂದು ಎಲ್ಲರಿಗೂ ಗೊತ್ತಾಯಿತು.
29
ಪುರೀಕ್ಷೇತ್ರದ ಜಗನ್ನಾಥ ದೇವಾಲಯದಲ್ಲಿ ಅರ್ಚಕನು ಶ್ರೀಕೃಷ್ಣನ ವಿಗ್ರಹದ ಪೀತಾಂಬರವನ್ನು ಬದಲಾಯಿಸಲು ಹೋದಾಗ...
ಅಯ್ಯೋ!.. ಶ್ರೀಕೃಷ್ಣನ ಪೀತಾಂಬರವೆಲ್ಲ ಹಲವು ಕಡೆ ಹರಿದುಹೋಗಿದೆ! ಇಂಥ ಪಾಪ ಕಾರ್ಯವನ್ನು ಯಾರು ಮಾಡಿರಬಹುದು?
ಅರ್ಚಕನು ರಾಜನ ಬಳಿಗೆ ಧಾವಿಸಿ, ಅವನಿಗೆ ಎಲ್ಲವನ್ನೂ ತಿಳಿಸಿದ.
30
ರಾಜನು ಈ ಬಗ್ಗೆ ವಿಚಾರಣೆ ಮಾಡುತ್ತಿದ್ದಾಗ ದೈವವಾಣಿ ಕೇಳಿಬಂತು.
ಎಲೈ ರಾಜನೆ, ಒಬ್ಬಾಕೆ ಮಹಿಳೆ ಕಾಡಿನಲ್ಲಿ ಕಟ್ಟಿಗೆ ಆರಿಸುತ್ತಿದ್ದಾಗ 'ಗೀತಗೋವಿಂದ' ಕಾವ್ಯವನ್ನು ಹಾಡುತ್ತಿದ್ದಳು. ಅವಳ ಹಾಡಿಗೆ ಮನಸೋತ ನಾನು ಅವಳನ್ನೇ ಎಲ್ಲೆಡೆ ಹಿಂಬಾಲಿಸಿದೆ. ಆದ್ದರಿಂದ ನನ್ನ ಪೀತಾಂಬರವೆಲ್ಲ ಹರಿದುಹೋಗಿದೆ.
ಭಗವಾನ್ ಶ್ರೀಕೃಷ್ಣನೇ ಈ ರೀತಿ ಮಾತಾಡಿದ್ದೆಂದು ಎಲ್ಲರಿಗೂ ತಿಳಿಯಿತು.




ಜಯದೇವನು ಈ ಮಾತನ್ನು ಹೇಳುತ್ತಿರುವಾಗಲೇ ಒಂದು ಅದ್ಭುತ ನಡೆದುಹೋಯಿತು.

33

ಅಲ್ಲಿನ ಪಂಡಿತರೆಲ್ಲ ತಮ್ಮ ನಿಜವೇಷವನ್ನು ಧರಿಸಿ ಶಿವ, ಪಾರ್ವತಿಯರಾಗಿ ನಿಂತರು. 'ಗೀತಗೋವಿಂದ' ಕಾವ್ಯದಿಂದ ರಾಧಾ-ಕೃಷ್ಣರು ಆವಿರ್ಭವಿಸಿದರು. ಅಲ್ಲಿ ನೆರೆದಿದ್ದ ಭಕ್ತರೆಲ್ಲ ಧನ್ಯರಾದರು.





ಸಾಧಕನ ಶಕ್ತಿ ಇರುವುದೆಲ್ಲಿ? ಅವನು ದೇವರ ಮಗು, ಕಂಬನಿಯೇ ಅವನ ಪರಮ ಶಕ್ತಿ . ಅತ್ತು ಬೇಡುವ ಮಗುವಿನ ಆಸೆಗಳನ್ನು ತಾಯಿ ತೃಪ್ತಿಪಡಿಸುವಂತೆ, ಭಗವಂತನು ಯಾವುದಕ್ಕಾಗಿ ತನ್ನ ಭಕ್ತನು ಅಳುತ್ತಿರುವನೋ ಅದನ್ನು ಈಡೇರಿಸುವನು.

— ಶ್ರೀರಾಮಕೃಷ್ಣರು